ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ೧೯೮೪-೮೫ನೇ ಸಾಲಿನಲ್ಲಿ ೪೪ ಜನ ಗರ್ಭಿಣಿ ಸ್ತ್ರೀಯರಿಗೆ ಮತ್ತು ೧-೪-೧೯೮೫ ರಿಂದ ೩೧-೧೨-೧೯೮೬ ರವರೆಗೆ ೧೪೯ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯೆ ನೀಡಲಾಗಿದೆ.

ಆ) ೧೯೮೪-೮೫ನೇ ಸಾಲಿನಲ್ಲಿ ೧೩,೨೦೦-೦೦ ರೂಪಾಯಿಗಳನ್ನು ಮತ್ತು ೧-೪-೧೯೮೫ ರಿಂದ ೩೧-೧೨-೧೯೮೬ ರವರೆಗೆ ೪೪,೨೦೦-೦೦ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಇ) ಹೌದು.

ಇಲಾಖೆಯ ಎಲ್ಲಾ ಯೋಜನೆಗಳ ಬಗ್ಗೆ ಅಂದರೆ ಹೆರಿಗೆ ಭತ್ಯೆ ಯೋಜನೆಯನ್ನು ಒಳಗೊಂಡಂತೆ ಆಕಾಶವಾಣಿ, ಸ್ಥಳೀಯ ವಾರ್ತಾ ಪತ್ರಿಕೆಗಳು ಮತ್ತು ಆರೋಗ್ಯ ಪೌಷ್ಟಿಕ ಆಹಾರ ಶಿಬಿರಗಳ ಮೂಲಕ ಪ್ರಚಾರ ಮಾಡಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಲಾಗಿದೆ.

ಶ್ರೀ ವಿನಯಕುಮಾರ್ ಸೊರಕೆ.—ಪುತ್ತೂರು ತಾಲ್ಲೂಕಿನಲ್ಲಿ ಗರ್ಭಿಣಿ ಸ್ತ್ರೀಯರಿಗೆ ಕೊಡುವಲ್ಲಿ ಒಟ್ಟು ಎಷ್ಟು ಖರ್ಚು ಆಗಿದೆ ಮತ್ತು ಅದಕ್ಕೆ, ಇಷ್ಟೆಂತಹ ಮೊತ್ತ ಎಷ್ಟು ಎಂದು ಕೇಳಿದ್ದೇನೆ. ಹಾಗೂ ಇದರ ಬಗ್ಗೆ ಹೆಚ್ಚಿನ ತಿಳುವಳಿಕೆ ಜನ ಸಾಮಾನ್ಯರಿಗೆ ಕೊಡಲಿಕ್ಕೆ, ಪ್ರಚಾರಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನು ನೀಡಿದ್ದಾರೆಯೇ ಎಂದು ಕೇಳಿದ್ದೇನೆ, ಅದಕ್ಕೆ ಇಲಾಖೆಯ ಎಲ್ಲಾ ಯೋಜನೆಗಳ ಬಗ್ಗೆ ಹೆರಿಗೆ ಭತ್ಯೆ ಯೋಜನೆಯನ್ನು ಒಳಗೊಂಡಂತೆ, ಆಕಾಶವಾಣಿ ಸ್ಥಳೀಯ ವಾರ್ತಾ ಪತ್ರಿಕೆಗಳು, ಮುಂತಾದವುಗಳಿಂದ ಪ್ರಚಾರ ಮಾಡಲಿಕ್ಕೆ ಉದ್ದೇಶಿಸಲಾಗಿದೆ ಎಂದು ಕೊಟ್ಟಿದ್ದಾರೆ.

ಹೆರಿಗೆ ಭತ್ಯೆಯನ್ನು ಕೃಷಿ ಕೂಲಿಗಾರರಿಗೆ, ದುರ್ಬಲವರ್ಗದವರಿಗೆ, ಮತ್ತು ಕಾರ್ಮಿಕರಿಗೆ ಕೊಡುತ್ತಾ ಇದ್ದೀರಿ. ಆದರೆ ಪುತ್ತೂರು ತಾಲ್ಲೂಕಿಗೆ ಹೊಂದಿಕೊಂಡು, ಆರೋಗ್ಯ, ಪೌಷ್ಟಿಕ ಆಹಾರ ಅಂಗನವಾಡಿ, ಇತ್ಯಾದಿ ಸೌಲಭ್ಯಗಳು ಪುತ್ತೂರು ತಾಲ್ಲೂಕಿಗೆ ಇಲ್ಲವಾಗಿದೆ, ಅದೇ ರೀತಿಯಲ್ಲಿ ಆಕಾಶವಾಣಿ, ಮತ್ತು ಸ್ಥಳೀಯ ವೃತ್ತಪತ್ರಿಕೆಗಳ ಮುಖಾಂತರ ಪ್ರಚಾರ ಮಾಡುವಂತಹ ಅವಕಾಶಗಳು ಅಲ್ಲಿ ಕಡಿಮೆ. ಮತ್ತು ಕೃಷಿ ಕೂಲಿಗಾರರಿಗೆ ತಿಳುವಳಿಕೆ ಕಡಿಮೆ. ಆದಕಾರಣ ತಮ್ಮ ಯೋಜನೆಗಳಿಂದ ಯಾರಿಗೆ ಪ್ರತಿಫಲ ಸಿಗಬೇಕೋ ಅವರಿಗೆ ಸಿಗುವ ಹಾಗೆ ಮಾಡಬೇಕು. ಆದರೆ ಈಗ ಹಾಗೆ ಅವರಿಗೆ ಸಿಗುತ್ತಾ ಇಲ್ಲ ಆದುದರಿಂದ ಹೆಚ್ಚು ಪ್ರಚಾರವನ್ನು ಕೊಟ್ಟು ಯಾವ ರೀತಿಯಲ್ಲಿ ಯೋಜನೆಯನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ವಿ. ಎಲ್. ಪಾಟೀಲ್.—ಎಲ್ಲಾ ಕಡೆಗಳಲ್ಲಿಯೂ ಮತ್ತು ಪುತ್ತೂರಿನಲ್ಲಿಯೂ ಕೂಡ ಈ ಬಗ್ಗೆ ಸಾಕಷ್ಟು ಪ್ರಚಾರ ಮಾಡಲಾಗಿದೆ. ಮೊದಲು ಈ ಸೌಲಭ್ಯವನ್ನು ಳಿಗ ಜನರು ಮಾತ್ರ ತೆಗೆದುಕೊಂಡಿದ್ದು, ಈಗ ಅದು ೧೪೯ ಜನರಿಗೆ ತಲುಪಿದೆ. ಐದಾರು ತಿಂಗಳಲ್ಲಿ ಇಷ್ಟು ಹೆಚ್ಚು ಜನರು ಪಡೆದುಕೊಂಡಿದ್ದಾರೆ. ಪ್ರಚಾರ ಆಗುತ್ತಾ ಇದೆ. ಸಂಬಂಧಪಟ್ಟ ಅಧಿಕಾರಿಗಳು, ಪತ್ರಿಕೆಗಳು ಆಕಾಶವಾಣಿ ಮುಂತಾದ ಮಾಧ್ಯಮದ ಮೂಲಕ ಪ್ರಚಾರ ನಡೆದಿದೆ. ಹಾಗೆಯೇ ತಾವುಗಳು ಕೂಡಾ ಪ್ರಚಾರ ಮಾಡಿ ಜನರಿಗೆ ತಿಳಿಸಿ ಹೇಳ ಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಸರಕಾರಿ ಸೇವೆಗಾಗಿ ಕನ್ನಡವನ್ನು ಕಡ್ಡಾಯ ಮಾಡಿದಲ್ಲಿ ಅಲ್ಪ ಸಂಖ್ಯಾತರಿಗೆ ತೊಂದರೆಯಾಗುವುದು.

೧೫೫೭. **ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ).**—ಪ್ರಾಥಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ನೇಮಕಾತಿಗೆ ಮೊದಲು ಕಡ್ಡಾಯ ಕನ್ನಡ ಬೇಕೆಂದು ಸರ್ಕಾರವು ಆದೇಶವನ್ನು ಹೊರಡಿಸಿದೆಯೇ ?

ಆ) ಹಾಗಿದ್ದಲ್ಲಿ ಕನ್ನಡ ಬಾರದ ಅಲ್ಪ ಸಂಖ್ಯಾತ ವರ್ಗದವರಿಗೆ ಸರ್ಕಾರದ ಯಾವುದೇ ಸೇವೆಗೆ ಸೇರುವ ಅವಕಾಶವನ್ನು ಕಿತ್ತುಗೊಂಡಂತಾಗುವುದಿಲ್ಲವೆ ?

ಇ) ಕನ್ನಡ ಬಾರದವರಿಗೆ, ಈಗಿರುವ ನಿಧಾನವನ್ನೇ ಸರ್ಕಾರವು ಇನ್ನು ೧೦ ವರ್ಷಗಳವರೆಗೆ ಮುಂದುವರೆಸುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮಂಖ್ಯಿ ಮಂತ್ರಿಗಳು).—

ಅ) ಸರ್ಕಾರಿ ಸೇವೆಯಲ್ಲಿ ಗ್ರೂಪ್ 'ಎ' 'ಬಿ' ಮತ್ತು 'ಡಿ' ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳು ನೇಮಕಾತಿಗೆ ಮುನ್ನ ಕನ್ನಡ ಭಾಷಾ ಜ್ಞಾನ ಹೊಂದಿರಬೇಕೆಂಬುದು ಕಡ್ಡಾಯವಾಗಿಲ್ಲ. ಆದರೆ, ಸರ್ಕಾರಿ ಸೇವೆಯಲ್ಲಿ ಗ್ರೂಪ್ 'ಸಿ' ಹುದ್ದೆಗಳಿಗೆ ದಿನಾಂಕ ೮-೮-೧೯೮೬ ರಿಂದ ಆಯ್ಕೆಯಾಗುವ ಎಲ್ಲ ಅಭ್ಯರ್ಥಿಗಳು ನೇಮಕಾತಿಗೆ ಮುನ್ನ ಕಡ್ಡಾಯವಾಗಿ ಸರ್ಕಾರವು ನಿಗದಿಪಡಿಸಿದ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗಿದೆ. ಸರ್ಕಾರಿ ವಲಯದ ಉದ್ಯಮಗಳಲ್ಲಿ ನೇಮಕಾತಿ ಮಾಡುವಾಗ ಶೇಕಡ ೮೦ ಕ್ಕಿಂತ ಹೆಚ್ಚು ಹುದ್ದೆಗಳಿಗೆ ಕನ್ನಡಿಗರಾದ ಅಭ್ಯರ್ಥಿಗಳನ್ನೆ ಆಯ್ಕೆ ಮಾಡಬೇಕೆಂದು ಸುತ್ತೋಲೆ ಹೊರಡಿಸಲಾಗಿದೆ.

ಆ) ಗ್ರೂಪ್ 'ಸಿ' ಹುದ್ದೆಗಳಿಗೆ ಸೇರಲಿಚ್ಛಿಸುವ ಅಲ್ಪ ಸಂಖ್ಯಾತ ವರ್ಗದವರಿಗೆ ಕನ್ನಡ ಕಲಿಯಲು ಸಾಕಷ್ಟು ಸಮಯಾವಕಾಶ ನೀಡಿರುವುದರಿಂದಲೂ ಹಾಗೂ ಅಲ್ಪ ಸಂಖ್ಯಾತರಿಗೆ ಕನ್ನಡದಲ್ಲಿ ತರಬೇತಿ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಮಾಡಿರುವ ವ್ಯವಸ್ಥೆಯಿಂದಾಗಿ, ಅವರಿಗೆ ಸರ್ಕಾರಿ ಸೇವೆಗೆ ಸೇರಲು ಅವಕಾಶವಿಲ್ಲವೆಂದು ಹೇಳಲಾಗುವುದಿಲ್ಲ.

ಇ) ಗ್ರೂಪ್ 'ಎ' 'ಬಿ' ಮತ್ತು 'ಡಿ' ಹುದ್ದೆಗಳು ಹಾಲಿ ಇರುವ ನೇಮಕಾತಿ ಪದ್ಧತಿಯು ಮುಂದುವರಿಯುವುದು. ಆದರೆ, ಗ್ರೂಪ್ 'ಸಿ' ಹುದ್ದೆಗಳ ನೇಮಕಾತಿ ಪದ್ಧತಿಯು ೮-೮-೧೯೮೬ರ ನಂತರ ಈಗ ಇರುವಂತೆ ಮುಂದುವರಿಯುವುದಿಲ್ಲ.

ಶ್ರೀ ಆರ್. ರೋಷನ್ ಬೇಗ್.—ಸನ್ಮಾನ್ಯ ಅಧ್ಯಕ್ಷರೆ, ತಾವು ಎ, ಬಿ, ಡಿ, ಪೋಸ್ಟ್‌ಗಳಿಗೆ officials have to pass Kannada Examination after 8-8-1986 ಎಂದು ಹೇಳಿದ್ದೀರಿ. ತಾವುಗಳು ಇನ್ನೊಂದು ಏನು ಹೇಳಿದ್ದೀರಿ ಅಂದರೆ They have got sufficient time to learn Kannada because the Department of Kannada is giving training. My fear is this. When the applicants were students in Tamil, Urdu Schools, there were no Kannada Teachers. It was the Government which did not fill up the Kannada Teachers posts in Minority Schools ಯಾರೋ ಒಬ್ಬ ಅರ್ಜಿ ಹಾಕುತ್ತಾನೆ. ಆದರಲ್ಲಿ Kannada knowledge of reading and writing essential ಅಂತ ಬರೆಯುತ್ತಾರೆ, ಅವನು ಇಲ್ಲ ಎಂದು ಬರೆದಾಗ ತಕ್ಷಣ your application is rejected ಎಂದು ಹೇಳುತ್ತಾರೆ. ನನಗೆ ಬಹಳ ಕಡೆಗಳಿಂದ ಈ ಬಗ್ಗೆ ಪತ್ರಗಳು ಬಂದಿವೆ. ತಾವು ಇದರಲ್ಲಿ ಗ್ರೂಪ್ (ಬಿ)ಗೆ ಅವಶ್ಯಕತೆ ಇಲ್ಲ ಎಂದು ಹೇಳಿದ್ದೀರಿ. ಗ್ರೂಪ್ (ಬಿ) ಯವರು ಬೆಂಗಳೂರು ಸಿಟಿ ಮತ್ತು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗಳಿಂದ ಕೇಳುತ್ತಾ ಇದ್ದಾರೆ ಅಭ್ಯರ್ಥಿ ಹೋದರೆ ಕನ್ನಡ ಬರೆಯುವುದಕ್ಕೆ ಬರುತ್ತದೋ ಎಂದು ಕೇಳುತ್ತಾರೆ, ಇಲ್ಲ ಅಂದರೆ ಮನೆಗೆ ಹೋಗು ಎನ್ನುತ್ತಿದ್ದಾರೆ. ಈ ರೀತಿಯಲ್ಲಿ ಹೆರಾಸ್ ಮಾಡುತ್ತಾ ಇದ್ದಾರೆ. If this is continued, it will affect the minorities. ನಾನು ಈ ಬಗ್ಗೆ ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ—ಈ ವಿಷಯದ ಬಗ್ಗೆ ಅರ್ಧ ಘಂಟೆ ಕಾಲದ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾಷ್ಯ ಸದಸ್ಯರ ಮೊದಲನೇ ಉಪ ಪ್ರಶ್ನೆಗೆ ನಾನು ಇನ್ನೂ ಉತ್ತರವನ್ನು ಕೊಟ್ಟಿಲ್ಲ, ಈಗಾಗಲೇ ಅರ್ಧ ಘಂಟೆಯ ಚರ್ಚೆ ಬಗ್ಗೆ ಕೇಳುತ್ತಿದ್ದಾರೆ.

ಅಧ್ಯಕ್ಷರು.—ಉತ್ತರವನ್ನು ಸರಿಯಾಗಿ, ಸಮರ್ಪಕವಾಗಿ ಕೊಟ್ಟಿಲ್ಲ ಅಂದರೆ ಅವಕಾಶ ಕೊಡುವ ಪ್ರಶ್ನೆ ಬರುತ್ತದೆ. ಈಗ ಸದಸ್ಯರಿಗೆ ಸರಿಯಾದ ಮಾಹಿತಿಯನ್ನು ಮಾನ್ಯ ಮಂಖ್ಯಿಮಂತ್ರಿಯವರು ಕೊಟ್ಟಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತಹ ಮಾತಿನಲ್ಲಿ ಸ ಲ್ಪಮಟ್ಟಿಗೆ ಸತ್ಯ ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ, ಅದೇನೆಂದರೆ ಒಂದು ಮಾತನ್ನು ನಾವು ಎಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕು, ಈ ವರ್ಷ ಸಮಗ್ರ ಕನ್ನಡ ಆಡಳಿತ ಭಾಷೆ ವರ್ಷ ಎಂದು ನಾವು ಘೋಷಣೆ ಮಾಡಿದ್ದೇವೆ. ಮತ್ತು ಅದನ್ನು ಕಟ್ಟುನಿಟ್ಟಾಗಿ ಜಾರಿಯಲ್ಲಿ

ತರುತ್ತೇವೆ, ಅಲ್ಪ ಸಂಖ್ಯಾತರಿಗೆ, ಯಾರ ಮಾತೃ ಭಾಷೆ ಕನ್ನಡ ಅಲ್ಲವೋ ಅಂತಹವರಿಗೆ, ಮಾನ್ಯ ಸದಸ್ಯರು ಹೇಳಿದ ಹಾಗೆ, ಈ ಉರ್ದು ಶಾಲೆಗಳಲ್ಲಿ ಎಲ್ಲಿಲ್ಲಿ ಕನ್ನಡ ಶಿಕ್ಷಕರು ಇಲ್ಲವೋ, ಅಂತಹ ಖಾಲಿ ಜಾಗಗಳನ್ನು ಎಲ್ಲ ಕಡೆಗಳಲ್ಲಿಯೂ ಭರ್ತಿ ಮಾಡಿದ್ದೇವೆ. ಮೊನ್ನೆ ತಾನೆ ಈ ತರಹದ ಮೂರು ನಾಲ್ಕು ಕೇಸ್‌ಗಳು ಬಂದಿದ್ದು ನಾನು ತಕ್ಷಣ ಅಂತಹ ಜಾಗಗಳಿಗೆ ಎರಡು ದಿವಸಗಳಲ್ಲಿ ಕನ್ನಡ ಅಧ್ಯಾಪಕರನ್ನು ನೇಮಿಸಬೇಕೆಂದು ಹೇಳಿದ್ದೇನೆ. ಇದು ಅತ್ಯಗತ್ಯವಾದುದು ಆಗಿದೆ. ಅಲ್ಪ ಸಂಖ್ಯಾತರು ಯಾರೂ ಕನ್ನಡ ಕಲಿಯಬಾರದಿಲ್ಲವೆಂದು ಹೇಳುವುದಿಲ್ಲ. ಅವರು ಹೇಳಿದ ಹಾಗೆ ಚಿಕ್ಕಂದಿನಲ್ಲಿಯೇ ಕನ್ನಡವನ್ನು ಯಾರು ಕಲಿತಿಲ್ಲ, ಅಂತಹವರಿಗೆ ನಾವು ಕನ್ನಡ ಭಾಷಾ ಜ್ಞಾನ ಇದೆಯೇ ಎಂದು ಕೇಳಿದಾಗ ಅವರು, ಇದೆ ಎಂದು ಹೇಳುವುದಿಲ್ಲ. ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದು, ಇಲ್ಲಿಯೇ ವಾಸವಾಗಿದ್ದು, ಅವರೆಲ್ಲರನ್ನೂ ಕನ್ನಡಿಗರು ಎಂದು ಕರೆಯಬಾರದಲ್ಲಿ ಏನೂ ತಪ್ಪಿಲ್ಲ. ಈಗ ಕನ್ನಡ ಭಾಷಾಜ್ಞಾನವನ್ನು ಏನು ಕೇಳುತ್ತಾರೆ ಅದು ಪಂಡಿತ ಜ್ಞಾನವಲ್ಲ. ಕೇವಲ ಸ್ವಲ್ಪ ಜ್ಞಾನ ಇದ್ದರೆ ಸಾಕು ಈ ದಿಶೆಯಲ್ಲಿ ಹೊರಲು ಇದ್ದ ಪರೀಕ್ಷೆಯನ್ನು ತೆಗೆದುಹಾಕಿ, ಎಲ್ಲಾ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡು, ಪಂಡಿತರ ಅಭಿಪ್ರಾಯಗಳನ್ನೂ ತೆಗೆದುಕೊಂಡು, ಸರಕಾರಿ ಸೇವೆಯನ್ನು ಮಾಡಲಿಕ್ಕೆ, ಜನಗಳ ಜೊತೆಗೆ ಸಮರ್ಪಕವಾದ ರೀತಿಯಲ್ಲಿ ವ್ಯವಹರಿಸಲಿಕ್ಕೆ, ಯಾವ ಭಾಷಾಜ್ಞಾನ ಎಷ್ಟರಮಟ್ಟಿಗೆ ಬೇಕೋ, ಎಷ್ಟು ಅವಶ್ಯಕತೆ ಇದೆಯೋ ಅಷ್ಟರಮಟ್ಟಿಗೆ ಕನ್ನಡ ಭಾಷಾ ಜ್ಞಾನ ಇದ್ದರೆ ಸಾಕು. ನಮಗೆ ಅವರೇನೂ ಕನ್ನಡದಲ್ಲಿ ಭಾಷಣ ಮಾಡಬೇಕಾಗಿಲ್ಲ. ಮತ್ತು ಪ್ರಬಂಧಗಳನ್ನು ಬರೆಯಬೇಕಾಗಿಲ್ಲ.

SRI R. S. MANE.—Sir, it is stated that Kannada Teachers are being appointed in all primary schools imparting education in other languages. Is the Hon. Minister aware of one letter written by Sri R. H. Goodwala, the Chairman of the State Minorities Commission which appeared in the newspaper on the 20th February, that the teaching Kannada compulsorily to the students whose mother tongue is not Kannada from 1st standard to the 3rd standard is illegal and unconstitutional. What the Chief Minister has to say about this? Whether he is going to withdraw teachers who are appointed to teach Kannada from 1st to 3rd Standard.

SRI RAMAKRISHNA HEGDE.—I have seen the Press Roport of the statement made by the Chairman of the Minorities Commission. I have not read the report yet. I may recall here that Mr. Azeez Sait, who was Minister of Labour insisted that arrangements should be made to teach Kannada in all Urdu Schools from the very begining *i.e*, from 1st standard so that the childern can get used to this Language. It is a different matter. My friend Mr. Mane and his friends are opposed to this. Actually last year or two years ago, Mr. Mane and and others of the MES asked me to withdraw Kannada teachers from the Marthi Schools. It is not in the interest of the childern of the minority communities.

SRI R. S. MANE.—I am having one document from which I read a letter, which shows the present policy of the Government as to how it is harassing the minorities in the State. This is addressed to the Chief Secretary to Government of Karnataka. Bangalore by the Minorities Commission, Khan Market Road, New Delhi. It is received here on the 4th February 1986. It must have been received

15 days back, What has been observed in this letter is that any minority area where a particular language is spoken or more than 15% of the people speak a particular language, that has to be called a minority locality and therefore, he has asked the State Government to use minority languages at such places for officials purposes and at district level and below like Municipals, tahsils etc., where a linguistic minority constitue 15%to 20%of the population. Important Government notices, rules and other publications should be published in minority languages also. Secondly, at the district level 60% of the people use a language, that does not apply to us. Thirdly at the State Head Quarters, a translation bureau should be set up, where arrangements should be made for translation and publication of all important laws, rules and regulations into minority languages. What the Government has done is...

(Interruption)

AN HON. MEMBER.—What is this, he is re ding something.

SRI R. S. MANE —It raises many questions Sir, that is why half-an-hour discussion may be allowed.

(Interruption)

SRI R. S. MANE.—Another suggestion has been made. I will read only one suggestion. Minorities should be given option to use Engish or Hindi as a medium of Examination for the State Services as an alternative to the official language of the State. What the Government has done about this and therefore my suggestion is to have an half-an-hour discussion on this subject.

ಶ್ರೀ ಎಂ. ಎಲ್. ಉಸ್ತಾದ್.—ಆದ್ದರಿಂದ ಇದರ ಬಗ್ಗೆ ಅರ್ಧ ಗಂಟೆ ಕಾಲದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು.—ರಮೇಶ್ ಕುಮಾರ್‌ರವರೇ ತಾವು ದಯವಿಟ್ಟು ಶಾಂತರಾಗಿ.....

ಶ್ರೀ ಆರ್. ಎಸ್. ಮಾನೇ.—ಅಧ್ಯಕ್ಷರೆ,.....

SRI RAMESH KUMAR.—We also have equal concern for the minorities. You are not given the monopoly to fight for the cause of minorities.

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ Now hon. Chief Minister to reply.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಅವರು ಯಾವುದರಿಂದ ಓದಿ ಹೇಳುತ್ತಿದ್ದಾರೋ ಅದು ಇದುವರೆಗೂ ನಮ್ಮ ಕೈ ಸೇರಿಲ್ಲ. ಅವರೇ ಹೇಳುತ್ತಿರುವಂತೆ ಳನೇ ತಾರೀಖು ಬರೆದಿರತಕ್ಕ ಪತ್ರ. ಬಹುಶಃ ಸೆಂಟ್ರಲ್ ಮೈನಾರಿಟಿ ಕಮಿಷನ್‌ನವರು ಬರೆದಿರತಕ್ಕ ಲೆಟರ್ ಇರಬಹುದು. ಅದು ನನಗೆ ಗೊತ್ತಿಲ್ಲ. ಅದನ್ನು ನಾನು ನೋಡುತ್ತೇನೆ. ಆದರೆ ಮಾನ್ಯ ಸದಸ್ಯರು ಹೇಳುವ ಪ್ರಕಾರ ಎಲ್ಲೆಲ್ಲಿ ೧೫ ಪರ್ಸೆಂಟ್ ಬೇರೆ ಭಾಷೆಯನ್ನು ಮಾತನಾಡತಕ್ಕ ಜನ ಇದ್ದಾರೆ ಅದನ್ನು ಮೈನಾರಿಟಿ ಪ್ರದೇಶವೆಂದು ತೀರ್ಮಾನ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಬಹಳ ಹಿಂದಿನ ಕಾಲದಿಂದಲೂ ಒಂದು ಪದ್ಧತಿ ಏನು ಬಂದಿದೆ ಎಂದರೆ ಶೇಕಡ ೧೫ಕ್ಕಿಂತ ಹೆಚ್ಚಿಗೆ ಜನರು ಒಂದು ಭಾಷೆಯನ್ನು ಮಾತನಾಡತಕ್ಕ ಪ್ರದೇಶದಲ್ಲಿದ್ದರೆ ಅಲ್ಲಿ ಅವರ ಮಕ್ಕಳಿಗೆ ಅವರ ಭಾಷೆಯಲ್ಲೇ ಶಿಕ್ಷಣ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಬೆಳೆದುಬಂದಿದೆ. ಇದನ್ನು ನಾವು ಮಾಡುತ್ತಿದ್ದೇವೆ.

ಇನ್ನು ಭಾಷಾಂತರ ವಿಚಾರದಲ್ಲಿ ಹೇಳುವುದಾದರೆ, ಬೆಳಗಾಂ ಮಂತ್ರಿತರ ಕಡೆಗಳಲ್ಲಿ ಮರಾಠಿ ಮತ್ತು ಕನ್ನಡದಲ್ಲಿ ಎರಡೂ ಭಾಷೆಗಳಲ್ಲಿ ಸರ್ಕಾರೀ ಆಜ್ಞೆಗಳನ್ನು ನಾವು ಹೊರಡಿಸುತ್ತಿದ್ದೇವೆ. ಎಲ್ಲೆಲ್ಲಿ ಬೇರೆ ಬೇರೆ ಭಾಷೆಯನ್ನು ಮಾತನಾಡತಕ್ಕ ಮೈನಾರಿಟಿ ಜನರಿದ್ದಾರೆ ಅಂಥಕಡೆ ಈ ಆಜ್ಞೆಗಳನ್ನು ತರ್ಜುಮೆ ಮಾಡಿಸಿಕೊಡತಕ್ಕ ವ್ಯವಸ್ಥೆಯನ್ನೂ ಕೂಡ ನಾವು ಮಾಡಿದ್ದೇವೆ.

SRI R. S. MANE.—In one of the Government offices there is Marathi sign Boards. That is why.....

MR. SPEAKER.—You please resume your seat.

SRI R. S. MANE.—That is why, half an hour discussion on this subject may be allowed.

ಶ್ರೀ ಕೆ ಜಿ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ಒಂದು ಮಾತನ್ನು ಹೇಳಿದರು. ಈ ವರ್ಷ ''ಸಮಗ್ರ ಕನ್ನಡ ವರ್ಷ'' ಎಂದು ಆಚರಣೆ ಮಾಡುತ್ತೇವೆ ಎಂದು. ಇದನ್ನು ನಾವು ಸ್ವಾಗತಿಸುತ್ತೇನೆ. ತಮಿಳು ಮತ್ತು ಉರ್ದು ಶಾಲೆಗಳಿಗೆ ಈಗ ಸರ್ಕಾರದವರು ಕನ್ನಡ ಅಧ್ಯಾಪಕರನ್ನು ನೇಮಕ ಮಾಡುವುದಕ್ಕೆ ಶುರು ಮಾಡಿದ್ದಾರೆ. ಈಗ ವಿದ್ಯಾರ್ಥಿಗಳು ಯಾರು ಇರುತ್ತಾರೆ ? ಕನ್ನಡವನ್ನು ಕಲಿಯಬೇಕಾದರೆ ೫–೬ ವರ್ಷ ಆಗುತ್ತದೆ. ನಮಗೆ ಕನ್ನಡವನ್ನು ಓದುವುದಕ್ಕಾಗಲಿ ಬರೆಯುವುದಕ್ಕಾಗಲಿ ಬರುವುದಿಲ್ಲ. ಇಂಥ ಒಂದು ಸೆನ್ಸಿಟಿವ್ ವಿಷಯವನ್ನು ಚರ್ಚೆಮಾಡಲು ಪ್ರತ್ಯೇಕವಾಗಿ ಅರ್ಧ ಗಂಟೆ ಕಾಲ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆಮಾಡತಕ್ಕಂಥ ಆವಶ್ಯಕತೆ ಇಲ್ಲವೆಂದು ಅನಿಸುತ್ತದೆ. ಮುಂದೆ ಡಿಮ್ಯಾಂಡ್ಸ್ ಬಂದಾಗ ಇದರ ಬಗ್ಗೆ ಮಾತನಾಡಬಹುದು. ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಮಾತನ್ನು ಹೇಳುವುದಾದರೆ ಮಾನ್ಯ ಸದಸ್ಯರಾದ ಇದಿನಬ್ಬನವರು ಮತ್ತು ಉಮರಬ್ಬನವರು ಇವರಿಬ್ಬರೂ ಕೂಡ ಕನ್ನಡದಲ್ಲಿ ಮಾತನಾಡುವುದನ್ನು ನೀವು ಕೇಳಿದರೆ ನಮ್ಮ ಕನ್ನಡ ಮಾತನಾಡತಕ್ಕವರಿಗಿಂತಲೂ ಹೆಚ್ಚು ಚೆನ್ನಾಗಿ ಮಾತನಾಡುತ್ತಾರೆ. ಅವರು ಇಷ್ಟೊಂದು ಚೆನ್ನಾಗಿ ಮಾತನಾಡುತ್ತಾರೆಯೆ ? ಎಂದರೆ ನಮಗೇ ಆಶ್ಚರ್ಯವಾಗುತ್ತದೆ.....

ಅಧ್ಯಕ್ಷರು.—ಮಾನ್ಯ ಉಮರಬ್ಬನವರು ಮೊದಲನೆಯವರು, ನಂತರ ಮಾನ್ಯ ಇದಿನಬ್ಬನವರು ಎರಡನೆಯವರು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಇದಿನಬ್ಬನವರು ಮೊದಲನೆಯವರು, ಉಮರಬ್ಬನವರು ಎರಡನೆಯವರು. ಇದಿನಬ್ಬನವರು ಕವಿಗಳು, ಅವರು ಬಹಳ ಸೊಗಸಾಗಿ ಕತೆಗಳನ್ನು ಬರೆಯುತ್ತಾರೆ. ಬಹಳ ಉತ್ತಮವಾಗಿ, ಸುಲಲಿತವಾಗಿ, ಸ್ವಚ್ಛವಾಗಿ ಅಪ್ಪಟ ಕನ್ನಡವನ್ನು ಸಾಹಿತ್ಯ ಭಾಷೆಯಲ್ಲಿ ಮಾತನಾಡುತ್ತಾರೆ. ಅವರಿಗೆ ಭಾಷೆ ಬರುವುದಿಲ್ಲವೆಂದು ಅಲ್ಲ. ಮಾನ್ಯ ಸದಸ್ಯರಾದ ಮಾನೆಯವರಿಗೆ ಮತ್ತು ಪಾಟೀಲ್‌ರವರಿಗೆ ಒಂದು ಮಾತನ್ನು ನಾನು ಹೇಳಬಯಸುತ್ತೇನೆ, ಮಾನಸ್ಸಿನಲ್ಲಿ ಪ್ರಿಜುಡಿಸ್ ಇರಬಾರದು.....

SRI R. S. MANE.—What does it mean ? I do not have prejudice towards any language.

SRI RAMAKRISHNA HEGDE.—I am sorry, Mr. Mane. It is not on insinuation. I said it in the spirit of friendly advice. If you go to the border areas in Maharashtra, no Kannada speaking man would take objection to the Board being written in Marathi. They have accepted. They do not have that kind of prejudice. They say that Marathi is the administrative language. As long as they are there, they have accepted but the same spirit is not shown by my Maharashtra friends.

SRI R. S. MANE.—Because we cannot read Kannada.

MR. SPEAKER.—Next question.

ಕಾದಿರಿಸಲಾದ ಅರಣ್ಯ ಪ್ರದೇಶ

೧೩೬೪. ಶ್ರೀಮತಿ ಸುಮಾ ವಸಂತ (ವೀರಾಜಪೇಟೆ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯಲ್ಲಿ ೧೯೦೫ರಲ್ಲಿ ಕೊಡಗು ಕಮಿಷನರ್ ದೇವರ ಕಾಡನ್ನು ರಕ್ಷಿತಾರಣ್ಯ ಎಂದು ಘೋಷಿಸಿದಾಗ ಇದ್ದ ದೇವರ ಕಾಡು ವಿಸ್ತೀರ್ಣವೆಷ್ಟು ? ಹಾಗೂ ೧೯೮೫ರಲ್ಲಿ ಇರುವ ಒಟ್ಟು ದೇವರ ಕಾಡು ವಿಸ್ತೀರ್ಣವೆಷ್ಟು ?

ಆ) ಈ ದೇವರ ಜಾಗವನ್ನು ರಕ್ಷಿತಾರಣ್ಯವೆಂದು ಮತ್ತು ಅಲ್ಲಿರುವ ಅರಣ್ಯ ಸಂಪತ್ತನ್ನು ನಾಶ ಮಾಡಬಾರದೆಂದು ಈ ಹಿಂದೆ ಘೋಷಣೆ ಏನಾದರೂ ಹೊರಡಿಸಿರುವುದು ನಿಜವೆ ?

ಇ) ಹಾಗಿದ್ದಲ್ಲಿ, ಈ ಭಾಗದಲ್ಲಿ ಅರಣ್ಯ ಇಲಾಖೆಯವರು ಅರಣ್ಯ ಸಂಪತ್ತನ್ನು ನಾಶ ಮಾಡುತ್ತಿರುವುದು ಹಾಗೂ ಪರಿಸರಗಳನ್ನು ಕಡಿಯುತ್ತಿರುವ ಬಗ್ಗೆ ಸರಕಾರದವರ ಗಮನಕ್ಕೆ ಬಂದಿದೆಯೇ ?

ಈ) ಈ ರೀತಿ ರಕ್ಷಿತ ಅರಣ್ಯವನ್ನು ಕಾಪಾಡಿಕೊಂಡು ಬಂದ ಹಿಂದಿನ ಸರಕಾರದ ಧೋರಣೆಯನ್ನು ಬದಲಿಸಿ ದೇವರ ಕಾಡನ್ನು ನಾಶ ಮಾಡಿ, ಕೊಡಗಿನ ಭವಿಷ್ಯಕ್ಕೆ ಹಾನಿ ತರುವ ಧೋರಣೆಯ ಉದ್ದೇಶವೇನು ?

ಉ) ಇಲ್ಲಿಯವರೆಗೆ ದೇವರ ಕಾಡಿನ ಅತಿ ಕ್ರಮಣ ಆಗಿರುವ ಕಾಡಿನ ವಿಸ್ತೀರ್ಣವೇನು ?

ಊ) ಈ ಅತಿಕ್ರಮಣದ ಬಗ್ಗೆ ಸರಕಾರದವರು ಕೈಗೆದುಕೊಂಡ ಕ್ರಮವೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ಅ) ೧೯೦೫ನೇ ಇಸವಿಯಲ್ಲಿ ಕೊಡಗಿನ ಮುಖ್ಯ ಆಯುಕ್ತರು ದೇವರ ಕಾಡುಗಳನ್ನು ಘೋಷಿಸಿದಾಗ ಇದ್ದ ವಿಸ್ತೀರ್ಣ ೪೨೨೦.೭೩೨ ಹೆಕ್ಟೇರ್ ಆಗಿದ್ದು. ೧೯೮೫ರಲ್ಲಿ ಆದರೆ ವಿಸ್ತೀರ್ಣ ೩೩೬೫.೫೭೦ ಹೆಕ್ಟೇರ್ ಆಗಿರುತ್ತದೆ.

ಆ) ಹೌದು.

ಇ) ಕೇವಲ ಬೆಳೆದ ಸತ್ತ ಮತ್ತು ಗಾಳಿಗೆ ಬಿದ್ದ ಮರಗಳನ್ನು ಮಾತ್ರ ಕಡಿಯಲಾಗಿದೆ, ಯಾಕೆಂದರೆ ಅವುಗಳನ್ನು ಹಾಗೆಯೇ ಬಿಡುವುದು ರಾಷ್ಟ್ರೀಯ ಅಪವ್ಯಯವಾಗುತ್ತದೆ. ಅಂತಹ ಮರಗಳನ್ನು ಕಡಿದು, ಸರಕಾರಿ ಮರ ಸಂಗ್ರಹಾಲಯಗಳಿಗೆ ಸಾಗಿಸಿ ೧೯೮೦-೮೫ ಮತ್ತು ೧೯೮೫-೮೬ರಲ್ಲಿ ಹರಾಜು ಮಾಡಲಾಗಿದೆ. ಇಂತಹ ಹರಾಜು ಮಾಡಿದ ಅಂದಾಜು ೧೫೮೫.೨೪೭ ಘ.ಮೀ. ಮರದ